## ಎನ್ಐಟಿಕೆ 23ನೇ ಘಟಿಕೋತ್ಸವದಲ್ಲಿ ಕಮಲ್ ಬಾಲಿ ಅಭಿಮತ

# ಯುವಕರಿಂದ ವಿಕಸಿತ ಭಾರತ ಸಾಧ್ಯ

**ಮಂಗಳೂರು** : ಪ್ರಧಾನಿ ನರೇಂದ್ರ ಮೋದಿ ಅವರ ವಿಕಸಿತ್ ಭಾರತ 2047ರ ಗುರಿ ತಲುಪಲು ಯುವ ಸಮುದಾಯ ಮಹತ್ವದ್ದಾಗಿದೆ ಎಂದು ವೋಲ್ವೋ ಗ್ರೂಪ್ ಆಫ್ ಇಂಡಿಯಾದ ಅಧ್ಯಕ್ಷ ಹಾಗೂ ಆಡಳಿತ ನಿರ್ದೇಶಕ ಕಮಲ್ ಬಾಲಿ ಹೇಳಿದರು.

ಶನಿವಾರ ಸುರತ್ಕಲ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಕರ್ನಾಟಕ ಇದರ 23ನೇ ವಾರ್ಷಿಕ ಘಟಿಕೋತ್ಸವದಲ್ಲಿ ಸಾಧಕ ವಿದ್ಯಾರ್ಥಿಗಳಿಗೆ ಪದವಿ ಪ್ರದಾನಗೈದು ಮಾತನಾಡಿ, ದೇಶದ ಜಿಡಿಪಿ ಏರುಗತಿಯಲ್ಲಿದ್ದು ತಲಾ ಆದಾಯವು ಏರುಗತಿಯನ್ನು ಕಾಣಬೇಕಿದೆ. ಇದಕ್ಕೆ ಪ್ರಬಲ ಆರ್ಥಿಕ ವ್ಯವಸ್ಥೆ, ಪಾರದರ್ಶಕತೆ, ಶಿಸ್ತು ಹಾಗೂ ಗುಣಮಟ್ಟದ ಕಾರ್ಯ ಚಟುವಟಿಕೆ, ದೇಶದ ಮೇಲೆ ಅಪಾರ ಪ್ರೀತಿ ಇವುಗಳನ್ನೆಲ್ಲ ಒಂದಾಗಿಸಿಕೊಂಡು ಮುನ್ನಡೆದಾಗ 2047ರ ಗುರಿಯನ್ನು ತಲುಪಲು ಸಾಧ್ಯವಿದೆ. ವಿದ್ಯಾರ್ಥಿ ಸಮುದಾಯ ಮುಂದಿನ 20 ವರ್ಷಗಳನ್ನು ಸುವರ್ಣ ವರ್ಷ ಎಂಬುದಾಗಿ ತಿಳಿದುಕೊಂಡು ದೇಶದ ಏಳಿಗೆಗೆ ಕೈಜೋಡಿಸಬೇಕಿದೆ. ಜಗತ್ತು ಇಂದು ಎಐ ತಂತ್ರಜ್ಞಾನ, ಶಕ್ತಿಯ ಉತ್ಪಾದನೆ, ತಾಂತ್ರಿಕತೆಯ ಮೇಲೆ ಅವಲಂಬನೆಗೆ ಒತ್ತು ನೀಡಿ ಮುನ್ನಡೆಯುತ್ತಿದ್ದು ಇದರ ಅವಕಾಶವನ್ನು ಭಾರತವು ಪಡೆದುಕೊಳ್ಳಬೇಕಿದೆ ಎಂದರು.

ಎನ್ಐಟಿಕೆ ನಿರ್ದೇಶಕ ಪ್ರೊ.ಬಿ.ರವಿ ಪ್ರಾಥಮಿಕವಾಗಿ



ಎನ್ಐಟಿಕೆ ಘಟಿಕೋತ್ಸವದಲ್ಲಿ ವೋಲ್ವೋ ಗ್ರೂಪ್ ಆಫ್ ಇಂಡಿಯಾದ ಅಧ್ಯಕ್ಷ ಕಮಲ್ ಬಾಲಿ ಪದವಿ ಪ್ರದಾನಗೈದರು. ಎನ್ಐಟಿಕೆ ನಿರ್ದೇಶಕ ಪ್ರೊ.ಬಿ.ರವಿ ಉಪಸ್ಥಿತರಿದ್ದರು.

ಮಾತನಾಡಿ, ಸಂಸ್ಥೆಯ ಸಾಧನೆಗಳನ್ನು ವಿವರಿಸಿದರು. 1995 ವಿದ್ಯಾರ್ಥಿಗಳಿಗೆ ಪದವಿ ಪ್ರದಾನಿಸಲಾಯಿತು. 935 ಬಿ.ಟೆಕ್, 641 ಎಂ.ಟೆಕ್, 23 ಸಂಶೋಧನಾ ವಿಭಾಗದ ಎಂ.ಟೆಕ್, 66 ಎಂಸಿಎ, 69 ಎಂಬಿಎ, 68 ಎಂಎಸ್ಇ, 193 ಪಿಎಚ್.ಡಿ, ಪದವಿ, 41 ಸಾಧಕ ವಿದ್ಯಾರ್ಥಿಗಳಿಗೆ ಚಿನ್ನದ ಪದಕ ವಿತರಿಸಲಾಯಿತು. ಎನ್ಐಟಿಕೆ ಹಳೇ ವಿದ್ಯಾರ್ಥಿ ಸಂಘದ ಅಧ್ಯಕ್ಷ ನಿರಂಜನ್ ಮಹಾಬಲಪ್ಪ, ವಿದ್ಯಾರ್ಥಿಗಳ ಪಾಲಕರಾದ ಬಿಹಾರದ ಐಜಿಪಿ ಎಂ.ಆರ್.ನಾಯ್ಕ್, ಮಧುಸೂದನ್ ಅಕ್ಕಿರೆಡ್ಡಿ ಅನಿಸಿಕೆ ವ್ಯಕ್ತಪಡಿಸಿದರು. ವಿವಿಧ ವಿಭಾಗಗಳ ಮುಖ್ಯಸ್ಥರು ಉಪಸ್ಥಿತರಿದ್ದರು.

Vijaya Vani, Date: 16/11/25, p. 05